ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 2873/25**

ಪಿಡಬ್ಲ್ಯುಃ – 2

ಸಿಡಬ್ಲ್ಯುಃ – 2

ದಿನಾಂಕಃ 15.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಧನು ರೈ |
| ತಂದೆಯ ಹೆಸರು | – ರಾಜು |
| ವಯಸ್ಸು | – 38 ವರ್ಷ |
| ವೃತ್ತಿ | – ಚಾಲಕ |
| ವಾಸಸ್ಥಳ | – ತಾಳತ್ ಮನೆ, ಮಡಿಕೇರಿ ತಾಲ್ಲೂಕು |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ಚಾಸಾ–1, 3 ರಿಂದ 6 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. ಆರೋಪತರು ಹಾಗೂ ನಮ್ಮ ನಡುವೆ ಯಾವುದೇ ಗಲಾಟೆ ಆಗಿಲ್ಲ, ಆರೋಪಿತರು ನಮಗೆ ಅವಾಚ್ಯ ಶಬ್ಧಗಳಿಂದ ಬೈದಿಲ್ಲ, ಜೀವ ಬೆದರಿಕೆ ಹಾಕಿಲ್ಲ, ನನ್ನ ಮತ್ತು ಚಾಸಾ–1 ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿಲ್ಲ, ಆರೋಪಿತರು ಚಾಸಾ–1 ರವರ ಇನೋವಾ ಕಾರು ಕೆಎ–41 ಎ–4659 ಗೆ ಯಾವುದೇ ರೀತಿ ನಷ್ಟ ಉಂಟು ಮಾಡಿಲ್ಲ. ಆರೋಪಿತರು ನನ್ನ ವಾಹನ ಕಾರು ಕೆಎ–02 ಎಡಿ–4971 ಗೂ ಕೂಡ ಯಾವುದೇ ರೀತಿ ನಷ್ಟ ಉಂಟು ಮಾಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

ಪಾಟೀ ಸವಾಲು ಮಾನ್ಯ ಸರಕಾರಿ ಅಭಿಯೋಜಕರಿಂದಃ-

ದಿಃ 03.06.2025 ರಂದು ಮೇಕೇರಿಯ ವೈಲ್ಡರ್ ನೆಸ್ ರೆಸಾರ್ಟಿಗೆ ಮುಂಬೈ ಮೂಲದ ಪ್ರವಾಸಿಗರು ಬಂದಿದ್ದು, ಅವರನ್ನು ವಿಮಾನ ನಿಲ್ದಾಣಕ್ಕೆ ಬಿಟ್ಟು ನಾನು ಹಾಗೂ ಚಾಸಾ-1 ರವರು ವಾಪಾಸ್ಸು ರೆಸಾರ್ಟಿಗೆ ಬರುತ್ತಿದ್ದಾಗ, ಮೇಕೇರಿಯ ನಮ್ಮ ರೆಸಾರ್ಟಿನ ಹತ್ತಿರ ಆರೋಪಿತರು ಅವರ ದ್ವಿ ಚಕ್ರ ವಾಹನ ಸಂಖ್ಯೆ ಕೆಎ-12 ವೈ- 7404 ಡಿಯೋ ಬೈಕಿನಲ್ಲಿ ನನ್ನ ಹಾಗೂ ಚಾಸಾ-1 ರವರ ಕಾರುಗಳನ್ನು ಓವರ್ ಟೇಕ್ ಮಾಡಿಕೊಂಡು ಬಂದು ಅಡ್ಡಗಟ್ಟಿ ನಮ್ಮನ್ನು ಅವಾಚ್ಯ ಶಬ್ಧಗಳಿಂದ ಬೈದು, ನಾನು ಚಲಾಯಿಸುತ್ತಿದ್ದ ಕಾರು ಸಂಖ್ಯೆ ಕೆಎ-02 ಎಡಿ-4971 ಗಾಡಿಯ ಬಾಗಿಲುಗಳಿಗೆ ಆರೋಪಿತರು ಕಾಲಿನಿಂದ ಒದ್ದು, ನಿಂದಿಸಿ ಯಾರಿಗೋ ಕರೆ ಮಾಡಿ ಬೆಂಗಳೂರಿನ ಎರಡು ಕಾರುಗಳು ಸಿಕ್ಕಿವೆ ಬೆಂಕಿ ಹಾಕಿ ಸುಡುವ ಎಂದು ಹೇಳಿ ನಮಗೆ ಜೀವಬೆದರಿಕೆ ಹಾಕಿದ್ದು ಕೂಡಲೇ ನಾನು 112 ಗೆ ಕರೆ ಮಾಡಿ ಪೊಲೀಸರನ್ನು ಕರೆಸಿರುತ್ತೇನೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಆರೋಪಿತರು ಮದ್ಯಪಾನ ಮಾಡಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳನ್ನು ಒಳಗೊಂಡದತೆ ನಾನು ಆರೋಪಿತರ ವಿರುದ್ಧ ದಿಃ 04.06.2025 ರಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಅಲ್ಲ ಗಳೆದ ಹೇಳಿಕೆಯ ಭಾಗವ ನ್ನು ನಿಪಿ-3 ಎಂದು ಗುರುತಿಸಲಾಯಿತು.

ನಿಪಿ-3 ರಲ್ಲಿ ಬರೆದ ವಿಚಾರ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ರಾಜಿ ಮಾಡಿಕೊಂಡಿರುವ ಕಾರಣ ಆರೋಪಿತರ ಪರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಪಾಟೀ ಸವಾಲುಃ – ಆರೋಪಿತರ ಪರ ವಕೀಲರಿಂದ ಏನು ಇಲ್ಲ.

ಮರು ವಿಚಾರಣೆಃ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.